ತೆರೆದ ಅಂಚೆ

# ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ

೧೬ ಮಾರ್ಚ್ ೨೦೧೭ ಗುರುವಾರ ಸಂಜೆ ೬.೦೦ ಕ್ಕೆ

ಸ್ಥಳ

ಶ್ರೀಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ, ಬೆಂಗಳೂರು – ೫೬೦೦೧೮

## ಆತ್ಮೀಯ ಆಮಂತ್ರಣ

ಶ್ರೀಮತಿ ಹಾಗೂ ಶ್ರೀ ______________________________

______________________________

______________________________


**ಕನ್ನಡ ಸಾಹಿತ್ಯ ಪರಿಷತ್ತು**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

ದೂ : ೨೬೬೨೩೫೮೪, ೨೬೬೧೨೯೯೧

www.kasapa.in e-mail : kannadaparishattu@gmail.com

# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

# ಫಾದರ್ ಚಸರಾ ಕನ್ನಡ ಸಂಸ್ಕೃತಿ
# ದತ್ತಿ ಪ್ರಶಸ್ತಿ ಪ್ರದಾನ

ಪ್ರಶಸ್ತಿ ಪ್ರದಾನ : **ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ : **ಡಾ. ಮನು ಬಳಿಗಾರ್**
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಪ್ರಶಸ್ತಿ ಪುರಸ್ಕೃತರು : **ಡಾ. ಲೀಲಾವತಿ ದೇವದಾಸ್**
ವೈದ್ಯ ಸಾಹಿತಿಗಳು

**ಶ್ರೀ ಇಂದೂಧರ ಹೊನ್ನಾಪುರ**
ಪತ್ರಕರ್ತರು

ಉಪಸ್ಥಿತಿ : **ಫಾದರ್ ಆ. ತೋಮಸ್**
ಅಧ್ಯಕ್ಷರು, ಕರ್ನಾಟಕ ಕನ್ನಡ ಧರ್ಮಗುರುಗಳ ಬಳಗ

**೧೬ ಮಾರ್ಚ್ ೨೦೧೭ ಗುರುವಾರ ಸಂಜೆ ೬.೦೦ ಕ್ಕೆ**

ಸ್ಥಳ

**ಶ್ರೀಕೃಷ್ಣರಾಜ ಪರಿಷನ್ಮಂದಿರ**

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೮

**ತಮಗೆ ಆದರದ ಸ್ವಾಗತ**

| ಡಾ. ರಾಜಶೇಖರ ಹತಗುಂದಿ | ವ.ಚ. ಚನ್ನೇಗೌಡ | ಪಿ. ಮಲ್ಲಿಕಾರ್ಜುನಪ್ಪ |
|---|---|---|
| ಗೌರವ ಕಾರ್ಯದರ್ಶಿ | ಗೌರವ ಕಾರ್ಯದರ್ಶಿ | ಗೌರವ ಕೋಶಾಧ್ಯಕ್ಷರು |

ಚಸರಾ ರಚಿತ ಗೀತೆಗಳ ಗಾಯನ : 'ಚಿಗುರು' ಬಳಗದವರಿಂದ ಸಂಜೆ ೫.೦೦ ಕ್ಕೆ

ಪು.ತಿ.ನೋ.

## ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ



ಫಾದರ್ ಚೌರಪ್ಪ ಸೆಲ್ವರಾಜ್ ಸಾಹಿತ್ಯಿಕ, ಸಾಂಸ್ಕೃತಿಕ ಬಳಗದಲ್ಲಿ ಚಸರಾ ಎಂದೇ ಪರಿಚಿತರು. ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ಚಸರಾ ಚರ್ಚ್‌ಗಳಲ್ಲಿ ಕನ್ನಡದ ಬಳಕೆ, ಕನ್ನಡಿಗರಿಗೆ ದೊರೆಯಬೇಕಾದ ಸಾಮಾಜಿಕ ನ್ಯಾಯಕ್ಕಾಗಿ ಸುದೀರ್ಘ ಹೋರಾಟ ಮಾಡಿದವರು. ಕನ್ನಡಪರ ಕಾಳಜಿಯನ್ನು ಜನಪರ ಕಾಳಜಿಯಾಗಿ ವಿಸ್ತರಿಸಿಕೊಂಡ ಚಸರಾ ಪ್ರಗತಿಪರ ಚಳುವಳಿಗಳ ಜತೆಗಿದ್ದವರು. ಯಾವುದೇ ಬಗೆಯ ಧಾರ್ಮಿಕ ಮೂಲಭೂತವಾದ ಮತ್ತು ಕೋಮುವಾದವನ್ನು ವಿರೋಧಿಸುವ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುವ ಬದ್ಧತೆಯನ್ನು ಹೊಂದಿದ್ದವರು. ಕನ್ನಡ ಕ್ರೈಸ್ತ ಸಾಹಿತ್ಯ ಮತ್ತು ಸಂಗೀತಕ್ಕೆ ಘನತೆಯುಳ್ಳ ಸ್ಥಾನಮಾನ ತಂದುಕೊಟ್ಟವರು. 'ಇಕ್ಕಟ್ಟಿಗೆ ಸಿಲುಕಿಸಿಬಿಟ್ಟೆ ಕ್ರಿಸ್ತಾ', 'ಅದುಮಿಟ್ಟ ನೆನಪಿನ ಪುಟಗಳಿಂದ' ಇವು ಇವರು ರಚಿಸಿದ ಕೃತಿಗಳು. ಖಲೀಲ್ ಗಿಬ್ರಾನ್‌ನ ಜೀಸಸ್ ಅನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ೧೩ ಕನ್ನಡ ಕ್ರೈಸ್ತ ಭಕ್ತಿಗೀತೆಗಳ ಧ್ವನಿ ಸುರುಳಿಗಳ ಜೊತೆಗೆ ೨೦೦ ಕ್ಕೂ ಹೆಚ್ಚು ಕ್ರೈಸ್ತ ಗೀತೆಗಳಿಗೆ ಸಾಹಿತ್ಯ ರಚನೆ ಮಾಡಿದ್ದಾರೆ. ಬೈಬಲ್ ಆಧಾರಿತ 'ಕ್ರಿಸ್ತ ದನಿ' ೭ ಗಂಟೆಗಳ ಗೀತ ನಾಟಕ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಇವರ ಬಹು ದೊಡ್ಡ ಕಾಣಿಕೆ.

ಸ್ವತಃ ಲೇಖಕರು, ಕನ್ನಡಪರ ಚಿಂತಕರು ಹಾಗೂ ಚರ್ಚ್‌ಗಳಲ್ಲಿ ಕನ್ನಡದಲ್ಲಿ ಪ್ರಾರ್ಥನೆಗೆ ಹೆಚ್ಚು ಒತ್ತು ನೀಡುತ್ತಾ ಬಂದಿದ್ದ ಫಾದರ್ ಚಸರಾ ಅವರು ಕನ್ನಡ ಸಾಹಿತ್ಯ, ಕಲೆಗಳ ಬೆಳವಣಿಗೆಗೆ ಶ್ರಮಿಸಿದ್ದರು. ಅವರ ನೆನಪಿನಲ್ಲಿ ದತ್ತಿ ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 'ಸಂಚಲನಾ ಬಳಗ'ದವರು ಸ್ಥಾಪಿಸಿದ್ದಾರೆ. ಮೂರು ಲಕ್ಷ ರೂಪಾಯಿಗಳ ಈ ದತ್ತಿಯಿಂದ ಪ್ರತಿವರ್ಷ ಓರ್ವ ಪ್ರತಿಭಾವಂತ ಸಾಹಿತಿ ಹಾಗೂ ಒಬ್ಬರು ಕನ್ನಡಪರ ಹೋರಾಟಗಾರರಿಗೆ ತಲಾ ಹತ್ತು ಸಾವಿರ ರೂಪಾಯಿಗಳ ನಗದು ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ.

## ಡಾ. ಲೀಲಾವತಿ ದೇವದಾಸ್



ಕರ್ನಾಟಕ ಕಂಡ ಅಪರೂಪದ ವೈದ್ಯ ಸಾಹಿತಿ ಡಾ. ಲೀಲಾವತಿ ದೇವದಾಸ್. ಕನ್ನಡ ಎಂ.ಎ, ಜರ್ಮನ್ ಭಾಷೆ ಮತ್ತು ದೈವಶಾಸ್ತ್ರ ಅಧ್ಯಯನ ಮಾಡಿದ್ದಾರೆ. ವೈದ್ಯ ವಿಜ್ಞಾನ, ಕನ್ನಡ ಸಾಹಿತ್ಯ ಮತ್ತು ದೈವಶಾಸ್ತ್ರ – ಈ ಮೂರು ವಿಚಾರಗಳ ಅಪೂರ್ವ ಸಂಗಮದ ಪರಿಣಾಮವಾಗಿ ಡಾ. ಲೀಲಾವತಿ ದೇವದಾಸ್ ಅವರ ಸಾಧನೆ ಅಪರೂಪದ್ದೇ ಆಗಿದೆ. ಮುಂಬೈ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕುಷ್ಠರೋಗ ನಿವಾರಣೆಯ ಅಭಿಯಾನದೊಂದಿಗೆ ಇವರ ವೈದ್ಯ ಸೇವೆ ಪ್ರಾರಂಭವಾಯಿತು. ಕರ್ನಾಟಕ ಸರ್ಕಾರದಲ್ಲಿ ಅಸಿಸ್ಟೆಂಟ್ ಸರ್ಜನ್, ಸರ್ಜನ್ ವಿಭಾಗೀಯ ಜಂಟಿ ನಿರ್ದೇಶಕರು ಮತ್ತು ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಗ್ರಾಮಾಂತರ ಪ್ರದೇಶಗಳಲ್ಲಿ ನೂರಾರು ಆರೋಗ್ಯ ಶಿಬಿರಗಳು, ಹತ್ತಾರು ರೇಡಿಯೋ ಮತ್ತು ದೂರದರ್ಶನ ಕಾರ್ಯಕ್ರಮಗಳು, ಹಲವು ಲೇಖನ, ಪುಸ್ತಕ, ಕಿರುಹೊತ್ತಿಗೆಗಳ ಮೂಲಕ ನಿರ್ಲಕ್ಷಿತ ಹೈದರಾಬಾದ್ ಕರ್ನಾಟಕ ಭಾಗದ ಗ್ರಾಮಾಂತರ ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸಿದ್ದಾರೆ. ಆರು ವೈದ್ಯಕೀಯ ಕಾಲೇಜುಗಳಲ್ಲಿ ಪ್ರೊಫೆಸರ್ ಮತ್ತು ವಿಭಾಗ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸಿದ್ದಾರೆ. ದೇಶ ವಿದೇಶಗಳನ್ನು ಸುತ್ತಿ ಜ್ಞಾನದ ಕೊಡುಕೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ೬೦ ಕೃತಿಗಳನ್ನು ರಚಿಸಿರುವ ಡಾ. ಲೀಲಾವತಿ ದೇವದಾಸ್ ಅವರಿಗೆ ೩ ಬಾರಿ ಕರ್ನಾಟಕ ರಾಜ್ಯ ಸರ್ಕಾರದ ಆರೋಗ್ಯ ಪ್ರಶಸ್ತಿ, ಕರ್ನಾಟಕ ರಾಜ್ಯ ಅಕಾಡೆಮಿ ಸುವರ್ಣ ಸೌರಭ, ಕುವೆಂಪು ವೈದ್ಯ ಸಾಹಿತ್ಯ ರತ್ನ ಪ್ರಶಸ್ತಿ, ಅತ್ತಿಮಬ್ಬೆ ಮತ್ತು ಕಿತ್ತೂರುರಾಣಿ ಚೆನ್ನಮ್ಮ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಸಂದಿವೆ. ಇದೀಗ 'ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿಯ' ಮೊದಲ ಪ್ರಶಸ್ತಿ ನೀಡಿ ಕನ್ನಡ ಸಾಹಿತ್ಯ ಪರಿಷತ್ತು ಗೌರವಿಸುತ್ತಿದೆ.

## ಶ್ರೀ ಇಂದೂಧರ ಹೊನ್ನಾಪುರ



ಇಂದೂಧರ ಹೊನ್ನಾಪುರ ಸದಾ ಹೋರಾಟದ ಹಾದಿಯಲ್ಲಿಯೇ ಚಲಿಸುತ್ತಿರುವವರು. ಮೂಲಭೂತವಾಗಿ ಪತ್ರಿಕೋದ್ಯಮದ ವಿದ್ಯಾರ್ಥಿ. ಇಡೀ ಜೀವಮಾನ ಪತ್ರಕರ್ತನಾಗಿಯೇ ಸೇವೆ ಸಲ್ಲಿಸಿದವರು. 'ಮುಂಗಾರು' ಪತ್ರಿಕೆಯಲ್ಲಿ ದುಡಿದ ಇವರು, 'ಸುದ್ದಿ ಸಂಗಾತಿ' ಪತ್ರಿಕೆಯನ್ನು ಪ್ರಾರಂಭಿಸಿದರು. 'ಬಂಡಾಯ ಹೊಸ ದಿಕ್ಕಿನೆಡೆಗೆ' ಇವರ ವೈಚಾರಿಕ ಕೃತಿ. ಪ್ರಸ್ತುತ 'ಸಂವಾದ' ಮಾಸ ಪತ್ರಿಕೆಯ ಮತ್ತು 'ಅಗ್ನಿ' ವಾರ ಪತ್ರಿಕೆಯ ಸಂಪಾದಕರಾಗಿದ್ದಾರೆ. ಮಾನವ ಹಕ್ಕುಗಳನ್ನು ಕಾಪಾಡುವ ನಿಟ್ಟಿನಲ್ಲಿ ಸದಾ ಕ್ರಿಯಾಶೀಲವಾಗಿರುವ 'ನ್ಯಾಯಕ್ಕಾಗಿ ನಾವು' ಸಂಘಟನೆಯ ಅಧ್ಯಕ್ಷರಾಗಿದ್ದಾರೆ. ದಲಿತ, ರೈತ, ಬಂಡಾಯ, ಕನ್ನಡಪರ ಹೋರಾಟಗಳಲ್ಲಿ ಸದಾ ಮಗ್ನರಾಗಿರುವ ಇಂದೂಧರ ಹೊನ್ನಾಪುರ ಅವರು ಸಮಾಜವನ್ನು ಆರೋಗ್ಯಕರ, ಜಾತ್ಯಾತೀತ ಸಮಾಜವಾದಿ ಹಾದಿಯಲ್ಲಿ ಕೊಂಡೊಯ್ಯಲು ಬಯಸುವವರು. ಆ ನಿಟ್ಟಿನಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಸ್ವಸ್ಥ ಸಮಾಜದ ಕನಸುಗಾರರಾಗಿರುವ ಇಂದೂಧರ ಹೊನ್ನಾಪುರ ಅವರಿಗೆ ಇದೀಗ ಕನ್ನಡ ಸಾಹಿತ್ಯ ಪರಿಷತ್ತು ಮೊದಲನೆ 'ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ' ನೀಡಿ ಗೌರವಿಸುತ್ತಿದೆ.